# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 933
2. ಸದಸ್ಯರ ಹೆಸರು : ಶ್ರೀ. ಶರವಣ ಟಿ.ಎ. (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 24.08.2026
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರಗಳು |
| --- | --- | --- |
| ಅ) | ತಮಿಳುನಾಡು ಸರಕಾರ ಅಕ್ರಮವಾಗಿ ಕಟ್ಟುತ್ತಿರುವ ಕಟ್ಟಲೈ ಕಾವೇರಿ ಪ್ರವಾಹ ನೀರು ತಿರುವಿನ ಯೋಜನೆಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು<br><br>ತಮಿಳುನಾಡು ರಾಜ್ಯವು ಕೈಗೊಂಡಿರುವ ಕಾವೇರಿ-ಕಟ್ಟಲೈ-ವೈಗೈ-ಗುಂಡಾರ್ ನದಿ ತಿರುವು ಯೋಜನೆಯ ವಿರುದ್ಧ ಕರ್ನಾಟಕ ರಾಜ್ಯವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಿನಾಂಕ:19.07.2021 ರಂದು ಮೂಲ ದಾವೆ ಸಂಖ್ಯೆ: 3/2021 ಮತ್ತು ಮಧ್ಯಂತರ ಅರ್ಜಿ ಸಂಖ್ಯೆ :112460/2021 ಅನ್ನು ದಾಖಲಿಸಿದೆ.<br><br>ಸದರಿ ಮೂಲದಾವೆಯಲ್ಲಿ ತಮಿಳುನಾಡು ರಾಜ್ಯವು ಕಾವೇರಿ ನೀರಿನ ಹೆಚ್ಚುವರಿ ನೀರನ್ನು ತಿರುವುಗೊಳಿಸಲು ಮಾಡಲು ಕೈಗೊಳ್ಳುತ್ತಿರುವ ಕಾವೇರಿ-ಸೌತ್-ವೆಲ್ಲಾರ್ ಯೋಜನೆಯನ್ನು ಹಾಗೂ ಇತರೆ ಕಾಮಗಾರಿಗಳನ್ನು ಕೈಗೊಳ್ಳದಂತೆ ನಿರ್ಬಂಧಿಸಲು ಕೋರಲಾಗಿದೆ.<br><br>ಮಾನ್ಯ ಸರ್ವೋಚ್ಚ ನ್ಯಾಯಲಯವು ರಾಜ್ಯವು ಸಲ್ಲಿಸಿದ್ದ ಮಧ್ಯಂತರ ಅರ್ಜಿಯ ವಿಚಾರಣೆಯನ್ನು ದಿನಾಂಕ: 20.01.2025 ರಂದು ನಡೆಸಿದ್ದು, ಯಾವುದೇ ಮಧ್ಯಂತರ ಪರಿಹಾರ/ತಡೆಯಾಜ್ಞೆಯನ್ನು ನೀಡದೆ ವಿಲೇವಾರಿ ಮಾಡಿರುತ್ತದೆ.<br><br>ಮೂಲ ದಾವೆ ಸಂಖ್ಯೆ:3/2021 ಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯವು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಮೂರು ಪರಿಣಿತ ಸಾಕ್ಷಿದಾರರನ್ನು ಪ್ರಸ್ತುತ ಪಡಿಸಿದ್ದು, ಈಗಾಗಲೇ ಇಬ್ಬರ ಪಾಟೀ ಸವಾಲು ಪೂರ್ಣಗೊಂಡಿರುತ್ತದೆ.<br><br>ರಾಜ್ಯವು ಸಲ್ಲಿಸಿರುವ ಮೂಲ ದಾವೆಯ ವಿಚಾರಣೆಯು ಜರುಗಬೇಕಾಗಿದೆ. |
| ಆ) | ಕೇಂದ್ರ ಪರಿಸರ ಮಂಜೂರಾತಿ, ಕೇಂದ್ರ ಜಲ ಆಯೋಗ, ಜಲಶಕ್ತಿ ಸಚಿವಾಲಯದ ಅನುಮತಿ ಪಡೆಯದೆ ತಮಿಳುನಾಡು ಸುಮಾರು 6500 ಕೋಟಿ ರೂಪಾಯಿ ವೆಚ್ಚದಲ್ಲಿ ಕಾವೇರಿ ನೀರನ್ನು ತಿರುಗಿಸುವ ಈ ಅಕ್ರಮ ಯೋಜನೆ ವಿರುದ್ಧ ಕಾನೂನು ಇಲಾಖೆ ತಕರಾರು ಸಲ್ಲಿಸಿದೆಯೇ: ಸಲ್ಲಿಸಿದ್ದಲ್ಲಿ ಅದರ ಸಂಪೂರ್ಣ ಮಾಹಿತಿ ನೀಡುವುದು: | |
| ಇ) | ಒಂದು ವೇಳೆ ತಕರಾರು ಸಲ್ಲಿಸದಿದ್ದಲ್ಲಿ, ತಕರಾರು ಸಲ್ಲಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ: | |
| ಈ) | ಇಷ್ಟೊಂದು ದೊಡ್ಡ ಯೋಜನೆ ನ್ಯಾಯಮಂಡಳಿಯ ಆದೇಶ ಉಲ್ಲಂಘಿಸಿ ತಮಿಳುನಾಡು ಕಾವೇರಿ ಕೊಳ್ಳದಲ್ಲಿ ಕೈಗೊಂಡರೂ ರಾಜ್ಯ ಸರ್ಕಾರ ಮೌನವಾಗಿರುವುದೇಕೆ? | |

| | | |
|---|---|---|
| | | ಮುಂದುವರೆದು ರಾಜ್ಯ ಸರ್ಕಾರದಿಂದ ಕೇಂದ್ರ ಜಲಸಂಪನ್ಮೂಲ ಸಚಿವಾಲಯಕ್ಕೆ, ಮಾನ್ಯ ಪ್ರಧಾನ ಮಂತ್ರಿಗಳಿಗೆ ಹಾಗೂ ಕೇಂದ್ರ ಜಲಶಕ್ತಿ ಸಚಿವರಿಗೆ ಹಲವಾರು ಪತ್ರಗಳ ಮುಖೇನ ತಮಿಳುನಾಡು ರಾಜ್ಯವು ಕೈಗೊಂಡಿರುವ ಕಾವೇರಿ-ವೈಗೈ-ಗುಂಡಾರ್ ಯೋಜನೆಗೆ ಯಾವುದೇ ಅನುಮೋದನೆಯನ್ನು ನೀಡಬಾರದೆಂದು ಹಾಗೂ ತಮಿಳುನಾಡು ರಾಜ್ಯವು ಸದರಿ ಯೋಜನೆಯನ್ನು ಮುಂದುವರೆಸದಂತೆ ನಿರ್ದೇಶನ ನೀಡುವಂತೆ ಒತ್ತಾಯಿಸಿದೆ.<br><br>ತಮಿಳುನಾಡು ರಾಜ್ಯವು ಕೈಗೊಂಡಿರುವ ಸದರಿ ಯೋಜನೆ ಕುರಿತಂತೆ ರಾಜ್ಯ ಸರ್ಕಾರವು ಅಗತ್ಯವಿರುವ ಎಲ್ಲಾ ಕಾನೂನಾತ್ಮಕ ಮತ್ತು ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳುತ್ತಿದೆ. |

**ಸಂಖ್ಯೆ: ಜಸಂಇ 74 ಕೃವಿಇ 2026**

**(ಎನ್. ಚೆಲುವರಾಯಸ್ವಾಮಿ)**
**ಜಲಸಂಪನ್ಮೂಲ ಸಚಿವರು**